**ಸಾಕ್ಷಿಯನ್ನು ದಿಃ 22.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಎಸ್ ವಕೀಲರಿಂದಃ**

ನಾಲ್ಕು ಬಿಡುಗಡೆ ಸಾರಾಂಶಗಳನ್ನು ನಿಪಿ. 8 ರಿಂದ 11 ಎಂದು, ಇ ಅಂಡ್ ಟಿ ವರದಿ ನಿಪಿ. 12 ಎಂದು, ನನ್ನ ಡಿ ಎಲ್ ಮತ್ತು ಆಧಾರ್ ಕಾರ್ಡ ನ ನೋಟರೈಸ್ಡ್ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳ ಮೂಲ ದಾಖಲೆಗಳೊಂದಿಗೆ ಹೋಲಿಕೆ ಮಾಡಿ ನೋಡಿ ಸರಿ ಇರುವುದು ಕಂಡು ಬಂದಿರುವುದರಿಂದ ನಿಪಿ. 13 ಮತ್ತು 14 ಎಂದು, ಕ್ರಮ ಸಂಖ್ಯೆ 1 ರಿಂದ 167 ವರೆಗಿನ ರೂ.2,71,703/- ಮೊತ್ತದ ಮೆಡಿಕಲ್ ಬಿಲ್ ಗಳನ್ನು ಒಟ್ಟಾಗಿ ನಿಪಿ. 15 ಎಂದು, ಕ್ರಮ ಸಂಖ್ಯೆ 1 ರಿಂದ 27 ವರೆಗಿನ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ. 16 ಎಂದು, ಅರ್ಜಿದಾರರ ಸ್ಥಿತಿಯ ಕುರಿತು 9 ಫೋಟೋಗಳನ್ನು ಹಾಗೂ ಸಿಡಿ ಯನ್ನು ಹಾಜರುಪಡಿಸಿದ್ದು, ಫೋಟೋ ಗಳನ್ನು ನಿಪಿ. 17 ಎಂದು, ಸಿ.ಡಿ.ಯನ್ನು ನಿಪಿ. 18 ಎಂದು, 14 ಎಕ್ಸ್ ರೇ ಫಿಲಂಗಳನ್ನು ಒಟ್ಟಾಗಿ ನಿಪಿ. 19 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಪಿ. 13 ಮತ್ತು 14 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಕೆ ಎಲ್ ಎಸ್ ವಕೀಲರಿಂದಃ**

ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.